ಲೇಖನ 05

# ಕೋಳಿ ಕೂಗಲು...ಅಮ್ಮ ಏಳುವರು...

ಕ್ಷಣಕ್ಷಣಕ್ಕೂ ಪ್ರಕೃತಿ ಹಲವಾರು ಸೂಚನೆಗಳನ್ನು ನೀಡುತ್ತಿರುತ್ತದೆ. ಅಪಾಯದ ಮುನ್ಸೂಚನೆಗೆ ಮುನ್ನುಡಿಯನ್ನೂ ಬರೆಯುತ್ತದೆ. ನಿತ್ಯ ಜೀವನಕ್ಕೆ ಪೂರಕವಾದರೂ ನಾವದನ್ನು ಕಡೆಗಣಿಸುತ್ತೇವೆ. ಪ್ರಕೃತಿಗೆ ವಿರುದ್ಧವಾಗಿ ಜೀವಿಸುತ್ತಿದ್ದೇವೆ. ಪರಿಣಾಮ ಇರುವುದನ್ನೆಲ್ಲವನ್ನು ಕಳೆದುಕೊಳ್ಳುತ್ತಿದ್ದೇವೆ.



ಚಿತ್ರ ಕೃಪೆ: ಅಶೋಕ್ N

ಅತಿ ತೀವ್ರವಾದ ಮಳೆ. ರೆಡ್ ಅಲರ್ಟ್ ಘೋಷಣೆ. ಉಚಿತವಲ್ಲದಿದ್ದರೂ ಸಿಕ್ಕಿತು ಮಕ್ಕಳಿಗೆ ಧರ್ಮಾರ್ಥ ರಜೆ. ಏಳೂವರೆಯಾದರೂ ಏಳದ ನನ್ನನ್ನು ಅಮ್ಮ ಎಬ್ಬಿಸಿದರು. ಮುಸುಕು ಸಡಿಲಗೊಳಿಸಿ," ಈ ಜಡಿ ಮಳೆಯಲ್ಲೂ ನಿಮಗೆ ಕೋಳಿ ಕೂಗು ಕೇಳಿತ್ತಾ ಅಮ್ಮಾ..? ಎಂಬ ಪ್ರಶ್ನೆ ಬಿಸಾಡಿದೆ.!

ನಿಮ್ಮ ಮನೆಯಲ್ಲಿ ಮೊದಲು ಏಳುವವರು ಯಾರು? ಎಂದು ಯಾರಲ್ಲಿ ಕೇಳಿದರೂ ಉತ್ತರ ಇದೆ. ಆದರೆ ಅವರನ್ನು ಎಬ್ಬಿಸುವವರು ಯಾರು.? ಗ್ರಾಮೀಣ ಪ್ರದೇಶದಲ್ಲಿ, ಅಲಾಮ್ ಇಲ್ಲದ ದಿನಗಳಲ್ಲಿ ಕೋಳಿ ಕೂಗಿದರೆ, ಬೆಳಗಾಗಿದೆ ಎಂಬುವುದೇ ನಂಬಿಕೆ. ಇಲ್ಲಿ ಸೃಷ್ಟಿಯ ವೈಚಿತ್ರ್ಯವೇನು.? ಹಾಗಾದರೆ ಕೋಳಿ ಬೆಳ್ಳಂಬೆಳಗ್ಗೆ ಮಾತ್ರವೇ ಕೂಗುವುದು.? ಸೂರ್ಯ ಉದಯಿಸಿದನೆಂದು ಕೋಳಿಗೆ ಗೊತ್ತಾಗುವುದಾದರೂ ಹೇಗೆ? ಹೀಗೆ ಮನುಷ್ಯನ ಮನಸ್ಸು ಉತ್ತರವಿಲ್ಲದ ಪ್ರಶ್ನೆಗಳನ್ನು ಆಲೋಚಿಸುತ್ತದೆ. ಅದರೆ, ಇಂದಿಗೂ ನಮ್ಮ ಅತೀ ಹಿರಿಯರು ಕೋಳಿ ಕೂಗಲು ಚಾಪೆಯನ್ನು ಮಡಚುತ್ತಾರೆ. ಮನೆ ಕೆಲಸಕ್ಕೆ ಸಿದ್ಧರಾಗುತ್ತಾರೆ.!

ಪುರುಷರು ಮನೆಯ ಮುಂದಿನ ತೋಟದ ಜವಾಬ್ದಾರಿಗೆ, ಹೆಂಗಳೆಯರು ಮನೆ ಕೆಲಸಕ್ಕೆ. ಜೊತೆಗೆ ಮಕ್ಕಳೂ ಸೇರಿಕೊಳ್ಳುತ್ತಿದ್ದರು ಅದೇ ಸಮಯಕ್ಕೆ. ಇದು ಹಿಂದಿನ ಕತೆಯಾದರೆ ಈಗಿನದ್ದು? ಅಲಾಮ್ ಆನ್ ಮಾಡಿ ತಲೆಯ ಮೇಲೆ ಮೊಬೈಲ್ ಇಟ್ಟು ಮಲಗುವವರೇ ಹೆಚ್ಚು. ಕೆಲವರಿಗಂತೂ ಮಿಕ್ಸಿಯ ಸ್ವರ ಕೇಳಲೇ ಬೇಕು. ನಮ್ಮನೆಯ ಈಗಿನ ಮಕ್ಕಳಿಗೆ ಅಪ್ಪನದ್ದು ಅಥವಾ ಅಮ್ಮನದ್ದು ದೊಡ್ಡ ಸ್ವರ ಕಂಪಿಸಲೇ ಬೇಕು. ಹೀಗೆ, ಯಾಂತ್ರಿಕ ಬದುಕಿಗೆ ಈಗಿನ ಪೀಳಿಗೆ ಒಗ್ಗಿಕೊಂಡು ಮುನ್ನುಗ್ಗುತ್ತಿದೆ. ಆದರೆ, ಐವತ್ತು ದಾಟಿದ ಹಿರಿಯರು ಇಂದಿಗೂ ಪ್ರಕೃತಿಯ ಹಾಡುಗಳಿಗೆ ಕಿವಿಕೊಡುತ್ತಾ ಪ್ರತಿಯೊಂದು ದಿನವನ್ನು ಆರಂಭಿಸುತ್ತಿದ್ದಾರೆ, ಜೀವಿಸುತ್ತಿದ್ದಾರೆ.

ಹೌದು, ಹಲವು ಪಕ್ಷಿ ಪ್ರಾಣಿಗಳ ಇಂಪಾದ ಹಾಡಿನ ಬಗ್ಗೆ ಹಿರಿಯರಿಗೆ ಉತ್ತಮ ಜ್ಞಾನವಿದೆ. ಮನೆ ಪರಿಸರದಲ್ಲಿ ಕಂಡು ಬರುವ ಎಲ್ಲಾ ಬಗೆಯ ಗಿಡ, ಮರ, ಬಳ್ಳಿಗಳ ಪರಿಚಯ ಅವರಿಗಿದೆ. ಹರಿಯುವ ನದಿ-ತೋಡು, ತುಂಬಿರುವ ಹಳ್ಳ-ಪಳ್ಳಗಳ ಹೆಸರುಗಳೂ ತಿಳಿದಿವೆ. ದನ, ಕರು, ನಾಯಿ, ಬೆಕ್ಕುಗಳಿಗೂ ನಮ್ಮ ಸಂಸ್ಕೃತಿಯ ಭಾಗವಾಗಿರುವ ಚಂದದ ಹೆಸರುಗಳನ್ನಿಡುತ್ತಿದ್ದರು. ಅವುಗಳನ್ನು ಮುದ್ದಿನಿಂದ ಸಾಕಿ ಸಲಹುವುದೂ ಅವರಿಗೆ ಗೊತ್ತಿತ್ತು. ನೆರೆಮನೆಯ ಪಶು ಪಕ್ಷಿಗಳ ಪರಿಚಯದೊಂದಿಗೆ ಅವುಗಳಿಗೂ ವಿಶೇಷ ಸ್ಥಾನಮಾನ ಲಭ್ಯವಾಗುತ್ತಿತ್ತು.

ಜನಸಂಖ್ಯೆ ಬೆಳೆದಂತೆ ಕೂಡು ಕುಟುಂಬಗಳು ಮಾಯವಾದವು. ಅಣು ಕುಟುಂಬಗಳಿಂದಾಗಿ ಮನೆಗಳು ಹೆಚ್ಚಾದವು. ಹಳ್ಳಿಗಳು ಕಾಣೆಯಾದವು. ಡಿಜಿಟಲ್ ಗ್ರಾಮಗಳು ಗರಿಗೆದರಿದವು. ಈ ನಡುವೆ ನಾವು ಪ್ರಕೃತಿಯ ನಿನಾದಗಳನ್ನು ಮರೆತು ಬಿಟ್ಟೆವು. ಪರಿಸರದ ಆಗುಹೋಗುಗಳನ್ನು ತಿಳಿಯುವುದರಲ್ಲಿ ನಿರಾಸಕ್ತಿಯಿಂದ ಬದುಕಿದೆವು. ತಾಂತ್ರಿಕತೆಯ ಒಳಿತುಗಳಿಗೆ ಮಾರು ಹೋದೆವು. ಪರಿಣಾಮ ನಿಸರ್ಗ ನೀಡುವ ಅನೇಕ ಕ್ಲೂ ಗಳನ್ನು ತಿಳಿಯದೆ ನಮ್ಮ ತನವನ್ನು ಕಳೆದುಕೊಂಡೆವು. ಪರಿಣಾಮ.?

ವಿಷವನ್ನು ತಿನ್ನುವ, ವಿಷಗಾಳಿಯನ್ನೇ ಉಸಿರಾಡುವ ವೈಜ್ಞಾನಿಕ ಯುಗದಲ್ಲಿ ಮನುಕುಲವು ಹೇಳ ಹೆಸರಿಲ್ಲದ ರೋಗಗಳಿಂದ ನರಳುತ್ತಿದೆ. ಹುಟ್ಟಿಸುವುದೂ, ಸಾಯಿಸುವುದೂ ಆಸ್ಪತ್ರೆಯಲ್ಲಿ ಎಂಬುವುದನ್ನು ಹಣಬರಹವನ್ನಾಗಿಸಿದ್ದಾನೆ.! ಪ್ರಕೃತಿಯ ಕೂಗಿಗೆ ಧ್ವನಿಯಾಗಬೇಕಾದ ಕಾಲ ಮಿಂಚಿಹೋಗಿದೆ.

ನಮ್ಮ ಹಿರಿಯರದ್ದು ಸಿಂಪಲ್ ಜೀವನ. ಆದ್ದರಿಂದಲೇ ಅವರು ಮನೆ ಮದ್ದಿನಲ್ಲೇ ನಿರೋಗಿಗಳಾಗುತ್ತಿದ್ದರು. ಆದರೆ ನಾವಿಂದು ಆಸ್ಪತ್ರೆಗೆ ತೆರಳಿ ರೋಗಿಗಳಾಗುತ್ತಿದ್ದೇವೆ. ಪ್ರತಿಯೊಂದು ಮನೆಯವರೂ ಬಣ್ಣ ಬಣ್ಣದ ಗುಳಿಗೆಗಳನ್ನು ನುಂಗಿಕೊಂಡು ಶ್ರೀಮಂತಿಕೆಯಿಂದ ಜೀವಿಸುತ್ತಿದ್ದಾರೆ.

ಹೀಗಿದ್ದರೂ ಅದೆಷ್ಟೋ ದೂರದಿಂದ ಇಂದಿಗೂ ಬೆಳ್ಳಂಬೆಳಗ್ಗೆ ಕೋಳಿ ಕೂಗು ಕೇಳಿ ಬರುತ್ತಿದೆ. ಏಳಿ, ಎದ್ದೇಳಿ ಪ್ರಕೃತಿಗೆ ಪೂರಕ ಜೀವನ ನಡೆಸಿ ಎನ್ನುವ ಸಂದೇಶ ಸಾರುತ್ತಿದೆ. ಆದರೆ ನಾವು-ನೀವು ಅದು ತೋರಿಸುವ ಜಾತಕಕ್ಕೆ ಕಿವಿಕೊಡದೆ ಅದೆಲ್ಲಿಗೋ ಪಯಣಿಸುತ್ತಿದ್ದೇವೆ, ನಿತ್ಯವೂ ಅದೇನನ್ನೋ ಅನುಭವಿಸುತ್ತಿದ್ದೇವೆ.!!




ಚಿತ್ರ ಕೃಪೆ: ಗುರುಪ್ರಸಾದ್

**ಪ್ರಕೃತಿಯೊಂದಿಗೆ ನಾವು...**

* ಗುಡ್ಡ ಜರಿತವಾಗಲಿದೆ ಎಂದು ತಿಳಿದಿದ್ದರೂ ಅಲ್ಲಿನ ಜೈವ ವ್ಯವಸ್ಥೆಯನ್ನು ನಾಶಮಾಡಿ, ಅವೈಜ್ಞಾನಿಕವಾಗಿ ಮಣ್ಣು ತೆಗೆದು ಅಲ್ಲೇ ಮನೆ ಮಠಗಳನ್ನು ನಿರ್ಮಿಸುತ್ತಿದ್ದೇವೆ.

* ಸಮುದ್ರ ತೀರವು ವಾಸಯೋಗ್ಯವಲ್ಲ, ಸಮುದ್ರ ಕೊರೆತ ನಿಸ್ಸಂಶಯ ಎಂಬ ಅರಿವಿದ್ದರೂ ಕಗ್ಗಲ್ಲು ತಂದು ಸುರಿದು, ಗಿಸೆ ತುಂಬಿಸುವ ಯೋಜನೆಗಳ ಮೂಲಕ ಸಮುದ್ರ ತೀರವನ್ನೇ ವಾಸ ಯೋಗ್ಯವನ್ನಾಗಿಸುವ ವ್ಯವಸ್ಥೆಯೂ ಸೋತು ಹೋಗಿದೆ

* ಹೆಚ್ಚು ನೀರು ಅಗತ್ಯವಿಲ್ಲದ ಆದರೆ ಗುಡ್ಡ ಬೆಟ್ಟಗಳ, ಎತ್ತರ ತಗ್ಗು ಪ್ರದೇಶದ ನೀರಿಂಗಿಸುವ ಸಾಮರ್ಥ್ಯವನ್ನು ಕಸಿದ ವಾಣಿಜ್ಯ ಕೃಷಿಯು ನಮ್ಮ ಭೂ ಪ್ರಕೃತಿಗೆ ಪೂರಕವಲ್ಲ ಎಂಬ ಸೂಚನೆಯನ್ನು ನೀಡಿದರೂ ವ್ಯವಸ್ಥೆ ಮೌನವಾಗಿದೆ.

* ದೇಶದ ಮೂಲೆ ಮೂಲೆಗಳಲ್ಲಿ ನಿರ್ಮಾಣವಾಗುತ್ತಿರುವ ಚತುಷ್ಪಥ, ಷಟ್ಪಥ ಹೈವೆಯು ಹಸಿರೀಕರಣವನ್ನು ಮರೆತು ಬಿಟ್ಟಿದೆ. ನೀರಹರಿವಿಗೆ, ಅಪಾರ ಜೈವ ವೈವಿಧ್ಯತೆಯ ನಾಶಕ್ಕೆ ಕಾರಣವಾದರೂ ಅದೇ ರಸ್ತೆಯಲ್ಲಿ ಬಹು ಬೇಗನೆ ಮಲ್ಟಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳಿಗೆ ತಲಪುತ್ತಿದ್ದೇವೆ.

* ಕಾಡು ಪ್ರಾಣಿಗಳ ಉಪಟಳ ಹೆಚ್ಚಾಗಿದೆ ಎಂದು ಬೊಬ್ಬಿಡುವ ನಾವು, ಅವುಗಳ ವಾಸಸ್ಥಾನಕ್ಕೆ ನುಗ್ಗಿ ಅನಗತ್ಯ ಅಭಿವೃದ್ಧಿ ಕೆಲಸಕ್ಕೆ ಜೆ.ಸಿ.ಬಿ ಬಳಸುವುದರ ಬಗ್ಗೆ ಮಾತೆತ್ತಲಾರೆವು. ಪರಿಣಾಮ ಮಾನವ ವನ್ಯಜೀವಿ ಸಂಘರ್ಷ ದಿನಗಳು ಕಳೆದಂತೆ ಹೆಚ್ಚುತ್ತಿದೆ.

* ಕೂಪ ಮಂಡೂಕಗಳು ವಟ ಗುಟ್ಟಲು ಆರಂಭಿಸಿವೆ-ಮಳೆ ಬರಲಿದೆ. ಮಣ್ಣು ದುಂಬಿಗಳು ಎದ್ದಿವೆ-ಮಳೆ ಜೋರಾಗಲಿದೆ. ದನಕರುಗಳು ಬಾಲ ಎತ್ತಿ ಓಡಲಾರಂಭಿಸಿವೆ-ಗಾಳಿ ಮಳೆ ಗ್ಯಾರಂಟಿ ಬೀಸಲಿದೆ.

ಇವೇ ಮೊದಲಾದ ಪ್ರಕೃತಿಯ ಮುನ್ಸೂಚನೆಗಳ ಬಗ್ಗೆ ಹಿರಿಯರು ಹೇಳುವುದನ್ನು ಕಿರಿಯರಿಗೆ ಕೇಳಲು ಪುರುಸೊತ್ತು ಇಲ್ಲವಾಗಿದೆ. ಇದರಿಂದ ಪರಿಸರ ಅಧ್ಯಯನ ಪಾಠ ಪುಸ್ತಕಕ್ಕೆ ಮಾತ್ರ ಸೀಮಿತವಾಗಿದೆ.

* ಇಲಿ ಜ್ವರ, ಡೆಂಗ್ಯುಜ್ವರ ಮಳೆಗಾಲದಲ್ಲಿ ಗ್ಯಾರಂಟಿ. ಡಿಜಿಟಲ್ ಜ್ವರ ಕ್ಲಿನಿಕ್ ಗಳೂ ರೆಡಿ. ಹಾಗಾದರೆ ಇಲಿ - ಸೊಳ್ಳೆಗಳ ಉತ್ಪಾದನೆಯನ್ನು ಕಡಿಮೆ ಮಾಡುವ ಸ್ವಚ್ಛ ಮಿಶನ್ ಕಡತದಲ್ಲಿ ಮಾತ್ರ ಉಳಿಯಿತೇ? ಅಲ್ಲ ಜನರ ಸಹಕಾರ ಸರಕಾರಕ್ಕೆ ಲಭ್ಯವಾಗಲಿಲ್ಲವೇ? ಪ್ರಮುಖ ರಸ್ತೆ-ಬೀದಿಗಳನ್ನು ನೋಡಿದರೆ ಸಾಕು ಉತ್ತರ ಸಿಗುತ್ತದೆ.

* ದಕ್ಷಿಣ ಭಾರತಕ್ಕೆ ಉತ್ತಮ ಮಳೆ, ಗಾಳಿ, ಬಿಸಿಲು ಸಿಗುವಂತೆ ಮಾಡುವ ಪಶ್ಚಿಮ ಘಟ್ಟವು ಈಗಾಗಲೇ ತನ್ನ ಧಾರಣಾ ಸಾಮರ್ಥ್ಯಕ್ಕಿಂತ ಹೆಚ್ಚಿನದ್ದನ್ನು ಹೊತ್ತುಕೊಂಡಿದೆ. ಇದನ್ನು ತಿಳಿದ ಅಧಿಕಾರಿಗಳು ಮೌನವಾಗಿದ್ದಾರೆ. ಸರಕಾರಿ ಖಜಾನೆ ಕೋರ್ಪರೇಟ್ ಗಳ ಬ್ಯಾಂಕ್ ಅಕೌಂಟ್ ತುಂಬುಸುತ್ತಿದೆ. ಸಾಮಾನ್ಯ ಕೃಷಿಕ ವಯುಕ್ತಿಕ ಸಾಲದ ಸುಳಿಯಲ್ಲಿ ಸಿಲುಕಿ ನರಳುತ್ತಿದ್ದಾನೆ.

**ರಾಜು ಕಿದೂರು**
**ಅಧ್ಯಾಪಕರು,**
**ಹೋಲಿ ಫ್ಯಾಮಿಲಿ ಅನುದಾನಿತ ಶಾಲೆ,**
**ಕುಂಬಳೆ, ಕೇರಳ**
**ಇಮೇಲ್: rajukidoor@gmail.com**